ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 10/03/2020

# ಸರ್ಕಾರಿ ಭೂಮಿ ಮರುವಶಕ್ಕೆ ಕ್ರಮ

ಉ.ವಾ 10/3/20

ವಿಧಾನಸಭೆ: ಯಲಹಂಕ ಹೋಬಳಿಯ ಚೊಕ್ಕನಹಳ್ಳೀಯಲ್ಲಿನ 21.19 ಎಕರೆ ಭೂಮಿ ಪಹಣಿಯಲ್ಲಿ ಸರ್ಕಾರಿ ಜಾಗ ಎಂದಿದ್ದರೂ ಮಾರಾಟ ಕರಾರು ಆಗಿ ನೊಂದಣಿಯಾಗಿರುವುದು ಗಮನಕ್ಕೆ ಬಂದಿದೆ.

**■ ಅಕ್ರಮವಾಗಿ ನೋಂದಣಿಯಾದ ಚೊಕ್ಕನಹಳ್ಳೀಯಲ್ಲಿನ 21.19 ಎಕರೆ ಭೂಮಿ**



ಈ ಭೂಮಿಯನ್ನು ನೂರಕ್ಕೆ ನೂರು ವಾಪಸ್ ಪಡೆದು ಸರ್ಕಾರಿ ಸೇವೆಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ್ ಭರವಸೆ ನೀಡಿದರು.

ಸೋಮವಾರ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಚೊಕ್ಕನಹಳ್ಳಿಯಲ್ಲಿ 21.19 ಎಕರೆ ಸರ್ಕಾರಿ ಭೂಮಿಗೆ ಮಾರಾಟ ಕರಾರು ಮಾಡಿ ನೋಂದಣಿ ಕೂಡ ಮಾಡಲಾಗಿದೆ. ಇದು ನಕಲಿ ಎಂದು ರಾಜ್ಯಸರ್ಕಾರ ನ್ಯಾಯಾಲಯದಲ್ಲಿ ವಾದ ಮಂಡಿಸಿದೆ. ಮೂರು ತಿಂಗಳಲ್ಲಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಲು ಪ್ರಯತ್ನಿಸಿ ಭೂಮಿ ವಾಪಾಸ್ ಪಡೆಯಲಾಗುವುದು ಎಂದು ತಿಳಿಸಿದರು.

ಇದಕ್ಕೆ ಸಮಾಧಾನಗೊಳ್ಳದ ಕೃಷ್ಣಬೈರೇಗೌಡ, ಪಹಣಿಯಲ್ಲಿ ಸರ್ಕಾರಿ ಭೂಮಿ ಎಂದಿದ್ದರೂ ಇಬ್ಬರು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಕರಾರು ಆಗಿದೆ. ಬಳಿಕ ನೋಂದಣಿ ಕೂಡ ಮಾಡಿಕೊಡಲಾಗಿದೆ.

ಈ ಬಗ್ಗೆ ಎರಡು ತಿಂಗಳಿನಿಂದ ತಹಸೀಲ್ದಾರ್ ಅವರಿಗೆ ತಿಳಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಅಧಿವೇಶನದಲ್ಲಿ ಪ್ರಶ್ನೋತ್ತರದಡಿ ಪ್ರಸ್ತಾಪಿಸಲು ಮುಂದಾಗುತ್ತಿದ್ದಂತೆ ತಹಸೀಲ್ದಾರ್ ಕ್ರಮಕ್ಕೆ ಮುಂದಾಗಿದ್ದಾರೆ.

ಒಂದು ಸರ್ಕಾರಿ ಆಸ್ತಿ ಉಳಿಸಲು ಸದನದಲ್ಲಿ ಪ್ರಶ್ನೋತ್ತರದಡಿ ಪ್ರಸ್ತಾಪಿಸಬೇಕಾದ ಸ್ಥಿತಿ ಇದೆ ಎಂದರೆ ಏನರ್ಥ. ಇದಷ್ಟೇ ಅಲ್ಲದೆ, ಬ್ಯಾಟರಾಯನಪುರ ಕ್ಷೇತ್ರದಲ್ಲಿ ಒಂದೇ ಆಸ್ತಿಯ ವಿಶಿಷ್ಟ ಗುರುತಿನ ಸಂಖ್ಯೆ ಬಳಸಿ ಹತ್ತಾರು ಆಸ್ತಿಗಳನ್ನು ನೋಂದಣಿ ಮಾಡಿ ವಂಚಿಸಲಾಗಿದೆ ಎಂದು ಸದನದ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಆರ್.ಅಶೋಕ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಪತ್ರ ಬರೆದ ನಂತರವೂ ಆಸ್ತಿ ನೋಂದಣಿಯಾಗಿದೆ. ಬಳಿಕ ತಹಸೀಲ್ದಾರ್ ಅವರನ್ನು ಅಮಾನತುಪಡಿಸಿದರು. ಮೂರು ದಿನದಲ್ಲೇ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅದೇ ಸ್ಥಳಕ್ಕೆ ಬಂದರು. ಬಳಿಕ ಅವರನ್ನು ತುಮಕೂರಿಗೆ ವರ್ಗಾವಣೆ ಮಾಡಲಾಯಿತು. ನಂತರ ಕೆಎಟಿ ಮೊರೆ ಹೋಗಿ ಮೂಲ ಸ್ಥಾನಕ್ಕೆ ಮರಳಿದರು ಎಂದು ಅಸಹಾಯಕತೆ ವ್ಯಕ್ತಪಡಿಸಿದರು.